1584ನೇ ಪ್ರಶ್ನೆ (221) 01/04/12

# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಚಿದಾನಂದ ಎಂ ಗೌಡ, ಇವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಉತ್ತರ.**

**ವಿಷಯ:** ರಾಜ್ಯದ ಗ್ರಾಮ ಪಂಚಾಯತಿಗಳನ್ನು ನಗರ ಸ್ಥಳೀಯ ಸಂಸ್ಥೆಯಾಗಿ ಉನ್ನತೀಕರಿಸಲು (ಪುರಸಭೆ ಮತ್ತು ಪಟ್ಟಣ ಪಂಚಾಯತ್ ಗಳನ್ನಾಗಿ) ಉನ್ನತೀಕರಿಸಲು ಅಧಿಸೂಚನೆ ಹೊರಡಿಸಿದ ಐದಾರು ತಿಂಗಳುಗಳೇ ಕಳೆದರೂ ಗ್ರಾಮ ಪಂಚಾಯತಿಗಳು ಅಧಿಕಾರ ಹಸ್ತಾಂತರ ಮಾಡಿರುವುದಿಲ್ಲ. ಅಧಿಸೂಚನೆ ಹೊರಡಿಸಿದ ನಂತರ ಅಧಿಕಾರ ಹಸ್ತಾಂತರಕ್ಕೆ ಮುನ್ನ ಗ್ರಾಮ ಪಂಚಾಯತಿಗಳು ಇ-ಖಾತಾ ವಿತರಿಸಬಹುದೇ?

ಉನ್ನತೀಕರಣಕ್ಕೆ ಅಧಿಸೂಚನೆ ಹೊರಡಿಸಿದ ನಂತರ (ದಿನಾಂಕ: 07.08.2025 ರ ನಂತರ) ಬೆಳಗಾವಿ ಜಿಲ್ಲೆಯ ಹಿಂಡಲಗಾ, ಬೆನಕನಹಳ್ಳಿ, ಹಿರೇಬಾಗೇವಾಡಿ ಮತ್ತು ಮೈಸೂರು ಜಿಲ್ಲೆಯ ರಾಮನಹಳ್ಳಿ ಹಾಗೂ ಕಡಕೊಳ ಗ್ರಾಮ ಪಂಚಾಯತಿಗಳಲ್ಲಿ (ದಿನಾಂಕ:26.03.2021 ರಿಂದ 31.08.2021 ರವರೆಗೆ) ವಿತರಿಸಿದ ಇ-ಖಾತಾಗಳ ಸಂಖ್ಯೆ ಎಷ್ಟು? (ಗ್ರಾಮ ಪಂಚಾಯತಿವಾರು, ದಿನಾಂಕ ವಾರು) ಸಂಪೂರ್ಣ ವಿವರ ನೀಡುವುದು.

ಗ್ರಾಮ ಪಂಚಾಯತಿಗಳು ಪೌರಾಡಳಿತ ಇಲಾಖೆಗೆ ಉನ್ನತೀಕರಣಗೊಂಡ ನಂತರ ಗ್ರಾಮ ಪಂಚಾಯತಿಗಳು ಕೆಲವು ಅಗತ್ಯ ಸೇವೆ ನೀಡದೆ, ತುರ್ತಾಗಿ ಅಧಿಕಾರ ಸಹ ಹಸ್ತಾಂತರ ಮಾಡದೆ, ಇರುವ ಕಾರಣ ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿರುವ ಬಗ್ಗೆ.

**ಉತ್ತರ:** ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 206 ಗ್ರಾಪಂಅ 2021,(ಇ), ದಿನಾಂಕ: 16.11.2022 ರನ್ವಯ ನಗರ ಸ್ಥಳೀಯ ಸಂಸ್ಥೆಗಳಿಗೆ ಅಧಿಸೂಚನೆ ಹೊರಡಿಸಿದ ನಂತರ ಗ್ರಾಮ ಪಂಚಾಯತಿಗಳ ಹಸ್ತಾಂತರ ಆಗುವವರೆಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರನ್ವಯ ಗ್ರಾಮ ಪಂಚಾಯತಿಗಳು ತಮಗೆ ವಹಿಸಿದ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ.

ಉನ್ನತೀಕರಣಕ್ಕೆ ಅಧಿಸೂಚನೆ ಹೊರಡಿಸಿದ ನಂತರ (ದಿನಾಂಕ: 07.08.2025 ರ ನಂತರ) ಬೆಳಗಾವಿ ಜಿಲ್ಲೆಯ ಹಿಂಡಲಗಾ, ಬೆನಕನಹಳ್ಳಿ, ಹಿರೇಬಾಗೇವಾಡಿ ಮತ್ತು ಮೈಸೂರು ಜಿಲ್ಲೆಯ ರಾಮನಹಳ್ಳಿ ಹಾಗೂ ಕಡಕೊಳ ಗ್ರಾಮ ಪಂಚಾಯತಿಗಳಲ್ಲಿ (ದಿನಾಂಕ:26.03.2021 ರಿಂದ 31.08.2021 ರವರೆಗೆ) ವಿತರಿಸಿದ ಇ-ಖಾತಾಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಗ್ರಾಮ ಪಂಚಾಯತಿಗಳು ಪೌರಾಡಳಿತ ಇಲಾಖೆಗೆ ಉನ್ನತೀಕರಣಗೊಂಡ ನಂತರ ಗ್ರಾಮ ಪಂಚಾಯತಿಗಳು ಕೆಲವು ಅಗತ್ಯ ಸೇವೆ ನೀಡದೆ, ತುರ್ತಾಗಿ ಅಧಿಕಾರ ಸಹ ಹಸ್ತಾಂತರ ಮಾಡದೆ, ಇರುವ ಕಾರಣ ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿರುವುದು ಸರ್ಕಾರಕ್ಕೆ ವರದಿಯಾಗಿರುವುದಿಲ್ಲ.

ದಿನಾಂಕ 16.11.2022 ರ ಸರ್ಕಾರದ ಸುತ್ತೋಲೆಯನ್ವಯ ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರನ್ವಯ ಗ್ರಾಮ ಪಂಚಾಯಿತಿಗಳು ನಗರ ಸ್ಥಳೀಯ ಸಂಸ್ಥೆಗಳಾಗಿ ಪರಿವರ್ತನೆಯಾದಾಗ ಗ್ರಾಮ ಪಂಚಾಯಿತಿಗಳಿಂದ ನಗರ ಪ್ರದೇಶಕ್ಕೆ ವರ್ಗಾಯಿಸಲ್ಪಡಬೇಕಾದ ವಿಷಯಗಳು ಹಾಗೂ ಅನುಸರಿಸಬೇಕಾದ ಪ್ರಮಾಣಿತ ಕಾರ್ಯಾಚರಣೆ ವಿಧಾನದ ಅನ್ವಯ ಕ್ರಮ ವಹಿಸಲಾಗುತ್ತಿದೆ.

ಸಂಖ್ಯೆ:RDPR 385 GPA 2026

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.